ಅಸಲು ದಾವಾ ಸಂ.35/2020
ಪಿ.ಡಬ್ಲ್ಯೂ .-1



<u>ಸಾಕ್ಷಿಗೆ ದಿಃ12-04-2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಖ್ಯ ವಿಚಾರಣೆ : ವಾದಿ ಪರ ಶ್ರೀ. ಎ ಎಸ್ ಜಿ ವಕೀಲರಿಂದಃ-</u>**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಎಲ್ಲ ಸಂಗತಿಗಳು ಸರಿ ಹಾಗೂ ಸತ್ಯವಿರುತ್ತವೆ ಮತ್ತು ನನಗೆ ತಿಳಿದಿರುತ್ತವೆ.

ದಾವಾ ಆಸ್ತಿಯ ನಾಲ್ಕು ಆಸ್ತಿ ಉತಾರನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 1 ರಿಂದ 4 ಎಂದು, ನೋಂದಾಯಿತ ಬಕ್ಸಿಶ್ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 5 ಎಂದು, ಟಿ ಎಂ ಸಿ ತೇರದಾಳ ಇವರ ಸಬೆಯ ಠರಾವಿನ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 6 ಎಂದು, ಆಸ್ತಿ ತೆರಿಗೆ ರಶೀದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 7 ಎಂದು, ಕರೆಂಟ ಬಿಲ್ ಮತ್ತು ರಶೀದಿಯನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 8 ಎಂದು, ಒಂದು ಪೋಟೋ ಮತ್ತು ಅದರ ಸಿಡಿಯನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 9 ಮತ್ತು 10 ಎಂದು, ಕಟ್ಟಡ ಪರವಾಣಗಿ ಆದೇಶದ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 11 ಎಂದು, ಆಸ್ತಿ ತೆರಿಗೆ ಪಾವತಿ ರಶೀದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 12 ಎಂದು ಗುರುತಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇ. ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ .

ಅಸಲು ದಾವಾ ಸಂ.35/2020
ಪಿ.ಡಬ್ಲ್ಯೂ .-1